ಹುಬ್ಬಳ್ಳಿನಗರದಲ್ಲಿ ಆಶ್ರಮ, ಅನಾಥಾಲಯ ಹಾಗೂ ಆಸ್ಪತ್ರೆಗಳಿಗೆ ನೀಡುವ ಪಡಿತರ ಪ್ರಮಾಣ

259(708) ಶ್ರೀ ಅಶೋಕ್‌ಶಂಕರ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಆಹಾರ ಪಡಿತರ ವಸ್ತುಗಳನ್ನು ಆಶ್ರಮ ಅನಾಥಾಲಯ, ಜೈಲು, ಆಸ್ಪತ್ರೆಗಳಿಗೆ ವಿತರಿಸಲಾಗುತ್ತಿದೆಯೇ?

ಆ)ಹಾಗಿದ್ದಲ್ಲಿ ಹುಬ್ಬಳ್ಳಿ ನಗರದಲ್ಲಿ ಆಶ್ರಮಅನಾಥಾಲಯ, ಆಸ್ಪತ್ರೆಗಳಿಗೆ ಆಹಾರ ಪಡಿತರ ವಸ್ತುಗಳನ್ನು ಪ್ರತಿ ತಿಂಗಳುಎಷ್ಟೆಟ್ಟುಪ್ರಮಾಣದಲ್ಲಿ ವಿತರಿಸಲಾಗಿವುದು?(ಸಂಪೂರ್ಣಮಾಹಿತಿ ಒದಗಿಸುವುದು)

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ)ಹೌದು. ಸರ್ಕಾರದಿಂದ ಮಾನ್ಯತೆ ಪಡೆದ ಅಥವಾ ಅನುದಾನ ಪಡೆಯುವ ಅನಾಥಾಲಯ(ನಿರಾಶ್ರಿತರ ಗೃಹ)ಬಂದೀಖಾನೆ, ಸರ್ಕಾರಿ ಹಾಗೂ ವಿದ್ಯಾರ್ಥಿನಿಲಯಗಳಿಗೆ ಪಡಿತರ ಪದಾರ್ಥಗಳನ್ನು ಒದಗಿಸಲಾಗುತ್ತಿದೆ.

ಆ)ಪಟ್ಟಿ ಲಗತ್ತಿಸಿದೆ.

ಹುಬ್ಬಳ್ಳಿ ನಗರದಲ್ಲಿ ದರೋಡೆ, ಸರಗಳ್ಳತನ ಇತ್ಯಾದಿ ತಡೆಗಟ್ಟುವುದು

260(711) ಶ್ರೀ ಅಶೋಕ್ ಶಂಕರ್ ಕಾಟ್ವೆ(ಹುಬ್ಬಳ್ಳಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಹುಬ್ಬಳ್ಳಿ ನಗರದಲ್ಲಿ 1997-98 ಹಾಗೂ 98-99ರಲ್ಲಿ ವರದಿಯಾದ ದರೋಡೆ, ಸರಗಳ್ಳತನ, ಕಾರು ಕಳ್ಳತನ ಹಾಗೂ ಅಪಹರಣ ಪ್ರಕರಣಗಳ ಸಂಖ್ಯೆ ಎಷ್ಟು;(ವರ್ಷವಾರು ಹಾಗೂ ಪ್ರಕರಣವಾರು ಮಾಹಿತಿ ಒದಗಿಸುವುದು)

ಆ)ಇವುಗಳ ಪೈಕಿ ಪತ್ತೆ ಹಚ್ಚಲಾದ ಪ್ರಕರಣಗಳ ಸಂಖ್ಯೆ ಎಷ್ಟು?

ಇ) ಈ ಪ್ರಕರಣಗಳನ್ನು ಹತೋಟಿಗೆ ತರಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ(ಗೃಹ ಸಚಿವರು)

ಅ)ಹುಬ್ಬಳ್ಳಿ ನಗರದಲ್ಲಿ 1997-98 ಹಾಗೂ 1998-99ರಲ್ಲಿ ವರದಿಯಾಗಿರುವ ದರೋಡೆ, ಸರಗಳ್ಳತನ, ಕಾರುಕಳ್ಳತನ ಹಾಗೂ ಅಪಹರಣ ಪ್ರಕರಣಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ.

ಅಪರಾಧಗಳು ವಿವರ	1997-98	1998-99 (5-3-99ರವರೆಗೆ)
ದರೋಡೆ	1	3
ಸರಕಳ್ಳತನ	1	8
ಕಾರು ಕಳ್ಳತನ	1	7
ಅಪಹರಣ	6	8

ಅ) 1997-98ಮತ್ತು 1998-99ರಲ್ಲಿ ಪತ್ತೆಯಾದ ಪ್ರಕರಣಗಳಸಂಖ್ಯೆಈ ಕೆಳಗಿನಂತಿರುತ್ತದೆ.

ಪತ್ತೆಯಾದ ಕೇಸುಗಳು	1997-98	1998-99 (5-3-99ರವರೆಗೆ)
ದರೋಡೆ	-	1
ಸರಕಳ್ಳತನ	-	1
ಕಾರು ಕಳ್ಳತನ	-	1
ಅಪಹರಣ	-	2

ಇ) ಇಂತಹ ಅಪರಾಧಗಳನ್ನು ತಡೆಗಟ್ಟವ ಬಗ್ಗೆ ಮುಂಜಾಗ್ರತಾ ಕ್ರಮವಾಗಿ ಪೋಲೀಸ್ ಕಮಿಷನರ್ ಬೀಟ್ ವ್ಯಾಪ್ತಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ಯಾಟ್ರೋಲಿಂಗ್ ವ್ಯವಸ್ಥೆ ನೌಕಾ ಬಂದಿ, ಚೌಕಿ ಸಿಸ್ಟಮ್ ಮತ್ತು ಕೀಲಿ ಹಾಕಿದ ಮನೆಗಳನ್ನುಪರಿಶೀಲಿಸುವುದು ಮುಂತಾದುವನ್ನು ಜಾರಿಗೆ ತರಲಾಗಿದೆ. ಅಲ್ಲದೆ ಗಸ್ತು ಮತ್ತು ಹಗಲು ಬೀಟುಗಳನ್ನು ಚುರುಕುಗೊಳಿಸಲಾಗಿದೆ ಮತ್ತು ಪೋಲೀಸ್ ಇನ್ಸ್ ಪೆಕ್ಟರ್ ರವರ ನೇತೃತ್ವದಲ್ಲಿ ಒಂದು ವಿಶೇಷತಂಡವನ್ನು ರಚಿಸಿ ಅದರಲ್ಲಿ ನುರಿತ ಕೈಂ ಸಿಬ್ಬಂದಿಯನ್ನು ನೀಡಿ ಮೇಲ್ಕಂಡ ಅಪರಾಧಿಗಳನ್ನು ಪತ್ತೆ ಮಾಡುವಲ್ಲಿ ವಿಶೇಷ ಮುತುವರ್ಜಿವಹಿಸುವಂತೆ ಅವರಿಗೆ ಸೂಚನೆಗಳನ್ನು ನೀಡಲಾಗಿದೆ. ಬೆದರಿಕೆಗೆ ಒಳಗಾಗುವಂತಹ ವ್ಯಕ್ತಿಗಳಿಗೆ ಸೂಕ್ತ ರಕ್ಷಣೆ ಒದಗಿಸಲಾಗುತ್ತಿದೆ.

ಹುಬ್ಬಳ್ಳಿ ನಗರ ಕ್ಷೇತ್ರದಲ್ಲಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕಾಮಗಾರಿಗಳು

261(712) ಶ್ರೀ ಅಶೋಕಶಂಕರ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಪ್ರದೇಶಾಭಿವೃದ್ಧಿ ಹಾಗೂ ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1996-97, 1998ಹಾಗ 1998-99ನೇ ಸಾಲಿನಲ್ಲಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಹುಬ್ಬಳ್ಳಿ ನಗರ ಕ್ಷೇತ್ರಕ್ಕೆ ಮಂಜೂರಾದ ಹಣ ವೆಷ್ಟು? ಮತ್ತು ಬಿಡುಗಡೆ ಮಾಡಲಾದ ಹಣವೆಷ್ಟು? ಹಾಗೂ ಕಾಮಗಾರಿಗಳು ಯಾವುವು(ವಿವರ ಒದಗಿಸುವುದು)

ಆ) ಉಳಿಕೆ ಹಣವನ್ನು ಎಂದು ಬಿಡುಗಡೆ ಮಾಡಲಾಗುವುದು.

ಇ) ಕೈಗೆತ್ತಿಕೊಂಡ ಕಾಮಗಾರಿಗಳ ಸಂಖ್ಯೆ ಎಷ್ಟು?

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಹಾಗೂ ಕಾಡಾ ರಾಜ್ಯ ಸಚಿವರು) :

ಅ) ವಿವರಗಳನ್ನು ಅನುಬಂಧ- 1ರಲ್ಲಿ ನೀಡಲಾಗಿದೆ.

ಆ) ಉಳಿಕೆ ಹಣ ಬಿಡುಗಡೆ ಬಗ್ಗೆ ಅನುಷ್ಠಾನಾಧಿಕಾರಿಗಳಿಂದ ಬೇಡಿಕೆ ಬಂದ ಕೂಡಲೇ ಬಿಡುಗಡೆ ಮಾಡಲಾಗುವುದು ಹಾಗೂ ಕಾಮಗಾರಿಗಳ ಬಗ್ಗೆ ಯೋಜನೆಮತ್ತು ಅಂದಾಜು ಪತ್ರಿಕೆ ಬಂದೊಡನೆ ಆಡಳಿತಾತ್ಮಕ ಮಂಜೂರಾತಿ ನೀಡಿ ಅನುಧಾನಬಿಡುಗಡೆ ಮಾಡಲಾಗುವುದು.

ಇ) ಒಟ್ಟು ಏಳು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ (1996-97-2, 1997-98-3 ಹಾಗೂ 1998-99ರಲ್ಲಿ-2 ಒಟ್ಟು:7)